
ಜಗಿಯದೆ ಉಳಿದಿದ್ದ ಮಾಂಸದ ತುಣುಕುಗಳು ಹಲ್ಲುಸೆಟ್ಟಿನ ನಡುವೆ ಅಲ್ಲಲ್ಲಿ ಉಳಿದುಕೊಂಡು ಘೋರ ದುರ್ಗಂಧವನ್ನು ಸೂಸುತ್ತಿದ್ದವು.

ಆ ಬಾಬಣ್ಣನ ಆ ಹೋಟೆಲಿಗೆ ಅಂಥಹ ಒಳ್ಳೆಯ ಹೆಸರೇನೂ ಇದ್ದಂತಿರಲಿಲ್ಲ. ತನ್ನ ಹೋಟೆಲಿನಲ್ಲಿ ಉಪಯೋಗಿಸುವುದು ಶುದ್ಧ ಬನ್ನೂರು ಕುರಿ ಮಾಂಸ ಎಂದು ಕೊಚ್ಚಿಕೊಳ್ಳುತ್ತಿದ್ದರೂ ಮಟನ್ ಮತ್ತು ಚಿಕನ್ ಹೆಸರಲ್ಲಿ ಅದೇನೇನು ಮಾಂಸ ಬೆರೆಸುತ್ತಿದ್ದನೋ? ಬ್ರಾಯ್ಲರ್ ಕೋಳಿ ನಾನು ಉಪಯೋಗಿಸುವುದೇ ಇಲ್ಲ, ನನ್ನದೇನಿದ್ದರೂ ನಾಟೀಕೋಳಿಯ ಶುದ್ಧ ಸ್ವಾದ ಎಂದು ಬಡಾಯಿ ಬಿಡುತ್ತಿದ್ದನಾದರೂ ತಿಂದಾಗ ಅದು ಅಸಲಿಗೆ ಕೋಳಿಯೇ ಇರಬಹುದೆ? ಎಂಬ ಗುಮಾನಿಯೂ ಬಾರದಿರುತ್ತಿರಲಿಲ್ಲ. ಆದರೆ, ಅವನಷ್ಟು ಕಡಿಮೆ ರೇಟಿನಲ್ಲಿ ಮಾಂಸಾಹಾರ ಕೊಡಲು ಯಾವನೂ ಬಿಲ್ಕುಲ್ ತಯಾರಿರಲಿಲ್ಲವಾಗಿ ಬಾಬಣ್ಣನ ಡಾಬಾಕ್ಕೆ ಜನ ಬರುತ್ತಲೇ ಇದ್ದರು. ಒಟ್ಟಾರೆ ಮಾಂಸ ಆದರೆ ಆಯಿತು. ಅದು ಚಿಕನ್ನೋ ಮಟನ್ನೋ ಮತ್ತೇನೋ ಎಂಬೋ ಉಸಾಬರಿ ಯಾಕೆ? ಮಾಂಸ ತಿನ್ನುವುದೆ ಆದರೆ ಅದು ಯಾತರದ್ದಾದರೆ ಏನು ಸಮಸ್ಯೆ ಎಂಬ ಉಢಾಫೆ ಮನಃಸ್ಥಿತಿ ಬಾಬಣ್ಣನ ಹೋಟೆಲ್ಲಿನ ಗಿರಾಕಿಗಳದ್ದು. ಈ ವೃದ್ಧನಿಗೂ ಹಣದ ಸಮಸ್ಯೆ ಇದ್ದರೂ, ಕೈ ನಡೆಯುತ್ತಿದ್ದಾಗ ನಡೆಸುತ್ತಿದ್ದ ಧಿಮಾಕಿನ ಫಲವಾಗಿ ಅಂಟಿಕೊಂಡ ಚಟಗಳಿಂದಾಗಿ ಅವನಿಗೆ ವಾರದಲ್ಲಿ ಕನಿಷ್ಠ ಒಂದೆರಡು ದಿನಗಳಾದರೂ ಮಾಂಸ ಮತ್ತು ಮದ್ಯ ಅಗತ್ಯವಾಗಿ ಬೇಕಾಗುತ್ತಿತ್ತು. ಹೀಗಾಗಿ ಬಾಬಣ್ಣ ಹೋಟೇಲಿನಿಂದ ಬರುತ್ತಿದ್ದ ಕಡಿಮೆ ದರ್ಜೆಯ ಊಟಕ್ಕೂ ಮತ್ತು ಹೆಚ್ಚುಕಡಿಮೆ ಸ್ಪಿರಿಟಿಗೆ ಬಣ್ಣ ಸೇರಿಸಿದಂತಿರುವ ಗುಮಾನಿಗೆ ಕಾರಣವಾಗುವಂತಿದ್ದ ರಮ್ಮಿಗೂ ಹೊಂದಿಕೊಳ್ಳುವುದು ಅವನಿಗೆ ಅನಿವಾರ್ಯವಾಗಿತ್ತು.



ಅವನ ಜಮಾನ ಮುಗಿದು ಯಾವುದೋ ಕಾಲವಾಗಿತ್ತು. ಒಂದು ಕಾಲದಲ್ಲಿ ಜನಪ್ರಿಯ ಸಿನಿಮಾ ನಟ ಆಗಿದ್ದಾಗ, ಕೈತುಂಬಾ ಹಣ ತುಂಬಿ ತುಳುಕುತ್ತಿದ್ದಾಗ ರಸಿಕ ಜೀವನ ನಡೆಸಿ ಈಗ ನಿವೃತ್ತಿಯ ನಂತರ ಎಲ್ಲವನ್ನೂ ಕಳೆದುಕೊಂಡು ಬಾಬಣ್ಣನ 'ಡಾಬಾ'ದ ಹಿಂಭಾಗದ ಕೊಠಡಿಯಲ್ಲಿ ಅನಾಮಿಕನಾಗಿ ವಾಸಿಸುತ್ತಿದ್ದ. ವೃತ್ತಿ ಜೀವನ ಏರುಗತಿಯಲ್ಲಿದ್ದ ಕಾಲದಲ್ಲಿ ಅಹಂಕಾರದಿಂದ ಎಲ್ಲರನ್ನೂ ಎದುರು ಹಾಕಿಕೊಂಡ ಕಾರಣ ವಯಸ್ಸಾದಮೇಲೆ ಉದ್ಯಮ ಅವನನ್ನು ತಿರಸ್ಕರಿಸಿ ಕೈಬಿಟ್ಟಿತ್ತು. ಅವನ ಸಮಕಾಲೀನ ನಟರು ಈಗ ವಯಸ್ಸಿಗನುಗುಣವಾಗಿ ಹಿರಿಯರ, ತಾತನ ಅಥವ ವೃದ್ಧರ ಪಾತ್ರಗಳನ್ನು ಮಾಡಿಕೊಂಡು ಹೇಗೊ ಚಾಲ್ತಿಯಲ್ಲಿದ್ದುಕೊಂಡು